ಜನರಿಕ್ ಔಷಧಿ ಮಳಿಗೆಗಳು

3846(4622); ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ (ನಿಪ್ಪಾಣಿ)

ಅ) ರಾಜ್ಯದಲ್ಲಿರುವ ಜನರಿಕ್ ಔಷಧಿ ಮಳಿಗೆಗಳು ಎಷ್ಟು ಮತ್ತು ಅವು ಎಲ್ಲೆಲ್ಲಿ ಕಾರ್ಯನಿರ್ವಹಿಸುತ್ತಿವೆ (ಜಿಲ್ಲಾವಾರು ಮತ್ತು ಆಸ್ಪತ್ರೆವಾರು ಮಾಹಿತಿ ಒದಗಿಸುವುದು);

ಆ) ಈ ಮಳಿಗೆಗಳ ಸ್ಥಾಪನೆಯಿಂದ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾತಿಯನ್ನು ಪಡೆಯುವ ಬಡರೋಗಿ ಬಹಳಷ್ಟು ಅನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಜನರಿಕ್ ಔಷಧಿ ಮಳಿಗೆಗಳನ್ನು ರಾಜ್ಯದ ಪ್ರತಿಯೊಂದು ಸರ್ಕಾರಿ ಆಸ್ಪತ್ರೆಯಲ್ಲಿ ಅಥವಾ ಹೆಚ್ಚಿನ ಸಂಖ್ಯೆಯಲ್ಲಿ ಆರಂಭಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ, ಇದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು;

ಇ) ಈ ಮಳಿಗೆಗಳು ಕೇವಲ ಆಸ್ಪತ್ರೆಗಳ ಆವರಣಗಳಲ್ಲಿರುವುದರಿಂದ ಹಲವಾರು ಬಡರೋಗಿಗಳಿಗೆ ಅನಾನುಕೂಲತೆಯಾಗುತ್ತಿದ್ದು, ಇಂತಹ ಮಳಿಗೆಗಳನ್ನು ರಾಜ್ಯದ ಹೋಬಳಿ ಮಟ್ಟದಲ್ಲಿ ಆರಂಭಿಸುವ ಯೋಜನೆಯು ಸರ್ಕಾರಕ್ಕೆ ಇದೆಯೇ;

ಈ) ಈ ಜನರಿಕ್ ಔಷಧಿ ಮಳಿಗೆಗಳನ್ನು ಎನ್.ಜಿ.ಓ. ಅಥವಾ ಇತರ ಸಹಕಾರಿ ಸಂಘಗಳ ಸಂಯುಕ್ತಶ್ರಾಯಗಳಲ್ಲಿ ನಡೆಸುವ ಯೋಜನೆಯು ಸರ್ಕಾರದ ಮುಂದಿರುವುದು ನಿಜವೇ, ಇದ್ದಲ್ಲಿ ಈ ಯೋಜನೆಯು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಆ) ಇ) ಮತ್ತು ಈ) ಇಲಾಖೆಯಿಂದ ಪ್ರತಿ ಜಿಲ್ಲೆಯ ಪ್ರತಿ ತಾಲ್ಲೂಕಿಗೊಂದರಂತೆ ಜನರಿಕ್ ಔಷಧಿ ಮಳಿಗೆ ಸ್ಥಾಪಿಸಲು

ಉದ್ದೇಶಿಸಲಾಗಿದೆ. ಆದರೆ 2014–15ನೇ ಸಾಲಿನ ಪ್ರಥಮ ಹಂತದಲ್ಲಿ ಜಿಲ್ಲಾ ಮಟ್ಟದಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ.

ಮೊರಾರ್ಜಿ ದೇಸಾಯಿ ವಸತಿ ಶಾಲೆ

3847(4624); ಶ್ರೀ. ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ (ನಿಪ್ಪಾಣಿ)

ಅ) ನಿಪ್ಪಾಣಿ ನಗರದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯು ಯಾವ ಸ್ಥಳದಲ್ಲಿ ನಡೆಯುತ್ತಿದೆ, ಎಷ್ಟು ವರ್ಷಗಳಿಂದ ನಡೆಯುತ್ತಿದೆ;

ಆ) ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡಕ್ಕೆ ಎಷ್ಟು ಅನುದಾನ ಮಂಜೂರಾಗಿದೆ, ಯಾವಾಗ ಮಂಜೂರಾಗಿದೆ;

ಇ) ಮಂಜೂರಾಗಿ ಹಲವು ತಿಂಗಳುಗಳು ಕಳೆದರೂ ಕೂಡಾ ಈವರೆಗೆ ಕಟ್ಟಡದ ಕಾಮಗಾರಿಯು ಆರಂಭಿಸದಿರುವುದಕ್ಕೆ ಕಾರಣವೇನು;

ಈ) ಈ ಕುರಿತು ಪ್ರಸ್ತಾವನೆ ಸಲ್ಲಿಸಲಾಗಿದೆಯೇ, ಯಾವಾಗ ಸಲ್ಲಿಸಲಾಗಿದೆ ಮತ್ತು ಅಂದಾಜು ಮೊತ್ತ ಎಷ್ಟು;

ಉ) ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ನಿಪ್ಪಾಣಿ ನಗರದಲ್ಲಿ ಹಿಂದುಳಿದ ವರ್ಗದ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಬಾಡಿಗೆ ಕಟ್ಟಡದಲ್ಲಿ ದಿ:2–10–2008 ರಲ್ಲಿ ಪ್ರಾರಂಭಿಸಲಾಗಿದೆ. ವಸತಿ ಶಾಲೆಯು 6 ವರ್ಷಗಳಿಂದ ನಡೆಯುತ್ತಿದೆ. ಚಿಕ್ಕೋಡಿ ತಾಲ್ಲೂಕಿನ ಜತ್ರಾತ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪುಷ್ಕರಾಜ್ ತಾರಳೆ ಇವರ ಮಾಲೀಕತ್ವದ ವಿ.ಪಿ.ಸಿ. 664 ರ ಬಾಡಿಗೆ ಕಟ್ಟಡಕ್ಕೆ ದಿನಾಂಕ: 28–03–2011 ರಿಂದ ಸ್ಥಳಾಂತರಿಸಲಾಗಿದೆ.

ಆ) ಹಿಂದುಳಿದ ವರ್ಗದ ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಪದವಿ ಪೂರ್ವ ವಸತಿ ಕಾಲೇಜುಗಳನ್ನು ನಿರ್ಮಿಸಲು 2014–15ನೇ